ಬಂದಿರುವುದು ನಿಜವಲ್ಲವೇ? ಹಾಗಿದ್ದಲ್ಲಿ, ಈ ಬಗ್ಗೆ ತಜ್ಞರ ಅಭಿಪ್ರಾಯ ಸಂಗ್ರಹಿಸಲಾಗಿದೆಯೇ?

ಶ್ರೀ ಈಟಿ ಶಂಭುನಾಥ (ಅರಣ್ಯ ಸಚಿವರು):-

ಅ) ಇಲ್ಲ.

ಆ) ಹೌದು

ಇ) ನಿಜ. ಈ ಸಂಬಂಧ ತಜ್ಞರ ಅಭಿಪ್ರಾಯ ಪಡೆಯಲಾಗಿದ್ದು, ಅದರ ಅಭಿಪ್ರಾಯದಂತೆ ನೀಲಗಿರಿ ಬೆಳೆಸುವುದು ಅಪಾಯಕಾರಿ ಎಂಬುದು ದೃಢಪಟ್ಟಿಲ್ಲ.

ಬಂಗಾರುಪೇಟೆ ತಾಲ್ಲೂಕಿನ ಉಪನೋಂದಣಿ ಕಛೇರಿ ಬಗ್ಗೆ.

೧೩೧೬(೨೦೦೦)ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೋಲಾರ ಜಿಲ್ಲೆಯ ಬಂಗಾರುಪೇಟೆ ತಾಲ್ಲೂಕಿನಲ್ಲಿ ಎಷ್ಟು ಉಪ-ನೋಂದಣಿ ಕಛೇರಿಗಳಿವೆ?

ಆ) ೧೯೯೯ ಜನವರಿಯಿಂದ ೧೯೯೧ರ ಡಿಸೆಂಬರ್ ಅಂತ್ಯದವರೆಗೆ ನೋಂದಾಯಿಸಲಾಗಿರುವ ಖಾಲಿ ಜಾಗಗಳು, ಮನೆಗಳು, ಕೃಷಿ ಜಮೀನು ಎಷ್ಟು?

ಇ) ಮೇಲೆ ಹೇಳಿದ ಅವಧಿಯಲ್ಲಿ ಈ ಉಪನೋಂದಣಿ ಕಛೇರಿಯಲ್ಲಿ ಆಸ್ತಿ ಅಪಮೌಲ್ಯಗೊಳಿಸಿ ದಾಖಲಿಸಿದ ಪತ್ತೆ ಮಾಡಿದ ದಸ್ತಾವೇಜುಗಳ ಸಂಖ್ಯೆ ಎಷ್ಟು?

ಈ) ಈ ರೀತಿ ಅಪಮೌಲ್ಯಗೊಳಿಸಿ ನೋಂದಾಯಿಸಿರುವುದನ್ನು ತಪ್ಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಉ) ಕಟ್ಟಡಗಳು ಇಲ್ಲದಿದ್ದರೂ, ಕಟ್ಟಡಗಳು ಇದೆ ಎಂದು ಘೋಷಿಸಿ ನೋಂದಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ಒಂದು

ಆ) ನೋಂದಾಯಿಸಲಾಗಿರುವ ಖಾಲಿ ಜಾಗಗಳು ೩೪೪೧, ಮನೆಗಳು ೫೮೬, ಕೃಷಿಜಮೀನುಗಳು ೮೦೬೩ ಒಟ್ಟು ೧೨೧೧೦.

ಇ) ೩೧೫ ಪ್ರಕರಣಗಳು.

ಈ) ಇಂತಹ ಪ್ರಕರಣಗಳಲ್ಲಿ ಕರ್ನಾಟಕ ಮುದ್ರಾಂಕ ಅಧಿನಿಯಮದ ಸೆಕ್ಷನ್ ೪೫-ಎ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಪರಿವಿಧಿಯನ್ನು ರಾಜ್ಯದಾದ್ಯಂತ ವಿಸ್ತರಿಸಿರುವುದರಿಂದ ಅಪಮೌಲ್ಯವನ್ನು ತಪ್ಪಿಸಬಹುದು.

ಉ) ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.